# ಬಾಹ್ಯಾಕಾಶ ತೆರೆದ ಬಾಗಿಲು

■ ಗುರುರಾಜ್ ಎಸ್. ದಾವಣಗೆರೆ

**ಬಾಹ್ಯಾಕಾಶದಲ್ಲಿನ ಚಟುವಟಿಕೆಗಳು ಈವರೆಗೆ ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಸಂಬಂಧಿಸಿದ ವಿದ್ಯಮಾನಗಳಾಗಿದ್ದವು 'ಇಸ್ರೋ' ತನ್ನನ್ನು ತಾನು ಖಾಸಗಿ ಸಹಭಾಗಿತ್ವಕ್ಕೆ ತೆರೆದುಕೊಳ್ಳುವ ಮೂಲಕ, ಭಾರತದ ಬಾಹ್ಯಾಕಾಶ ಸಂಶೋಧನೆ ಮತ್ತು ಚಟುವಟಿಕೆಗಳಿಗೆ ರಾಕೆಟ್ ವೇಗ ದೊರೆಯಲಿದೆ ಎಂದು ನಿರೀಕ್ಷಿಸಲಾಗಿದೆ. ನೇರ ವಿದೇಶಿ ಬಂಡವಾಳ ಹೂಡಿಕೆಗೂ ಭಾರತದ ಬಾಹ್ಯಾಕಾಶ ಕ್ಷೇತ್ರ ಬಾಗಿಲು ತೆರೆದಿದೆ. ಪ್ರಸ್ತುತ ಬಾಹ್ಯಾಕಾಶ ಕ್ಷೇತ್ರದ ಚಟುವಟಿಕೆಗಳಲ್ಲಿ 'ಇಸ್ರೋ' ವಿಶ್ವದಲ್ಲಿ ಐದನೇ ಸ್ಥಾನದಲ್ಲಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಳ್ಳಲು ಖಾಸಗಿ ಸಹಯೋಗ ಇಸ್ರೋಗೆ ಸಹಕಾರಿ ಆಗಲಿದೆ. ಆದರೆ, ಬಾಹ್ಯಾಕಾಶ ಚಟುವಟಿಕೆಗಳಲ್ಲಿ ಖಾಸಗಿ ಸಂಸ್ಥೆಗಳಿಗೂ ಪಾಲು ಕಲ್ಪಿಸುವುದರಿಂದ ಒಂದಷ್ಟು ಸಮಸ್ಯೆ-ಸವಾಲುಗಳು ಎದುರಾಗಲಿವೆ. ಬಾಹ್ಯಾಕಾಶ ಕ್ಷೇತ್ರದ ಹೊಸ ವಿದ್ಯಮಾನಗಳ ವಿಹಂಗಮ ನೋಟ ಈ ಸಂಚಿಕೆಯ 'ಸುಧಾ' ವಿಶೇಷ.**